ಯುವಕನಾಗಿದ್ದ. ರಾಮದಾಸ ಒಳ್ಳೆಯ ಮೈಕಟ್ಟನ್ನು ಹೊಂದಿದ್ದ. ಹರಿಲಾಲ ತನ್ನ ಮೂವರು ಸಹೋದರರೊಂದಿಗೆ ಮಾತನಾಡಿ ತನ್ನ ಆಫ್ರಿಕಾದ ದಿನಗಳ ಅನೇಕ ಸಂಗತಿಗಳನ್ನು ಹಸಿರುಗೊಳಿಸಿದ. ಅವನಿಗೆ ತನ್ನ ಬಗ್ಗೆಯೇ ಆಶ್ಚರ್ಯವಾಯಿತು. ಫೀನಿಕ್ಸ್ ಆಶ್ರಮದ ವೃಕ್ಷಗಳಿಂದ ಹಿಡಿದು ಡರಬನ್‌ನ ರೇವುಪಟ್ಟಣದವರೆಗೆ ಎಲ್ಲವೂ ಹಾಗೆಯೇ ಇತ್ತು. ಅಲ್ಲಿ ಯಾವುದೂ ಬದಲಾವಣೆಯಾಗಿರಲಿಲ್ಲ. ಹಿಂದಕ್ಕೆ ಸರಿದ ಸ್ಥಳಗಳು ಹಾಗೂ ಕಳೆದು ಹೋದ ಸಮಯ ಎರಡೂ ಅವನ ಸ್ಮೃತಿಪಟಲದಲ್ಲಿ ವಿಚಿತ್ರ ಸಂವೇದನೆಗಳನ್ನು ಜಾಗ್ರತಗೊಳಿಸುತ್ತವೆ ಎಂಬ ಹೊಸ ಅನುಭವವನ್ನು ಹರಿಲಾಲ ಮನಗಾಣುತ್ತಿದ್ದ.

'ಮಣಿಲಾಲ, ಹರಿಲಾಲ ಕೇಳಿದ, 'ಬಾಪೂ ಆಫ್ರಿಕಾದಿಂದ ಬಂದು ಎಲ್ಲಿಗೆ ನೇರವಾಗಿ ಹೋಗಲಿದ್ದಾರೆ ಎಂಬುದು ನಿನಗೇನಾದರೂ ಗೊತ್ತಿದೆಯೇ?'

'ತಾವು ಸೇಠ್ ನರೋತ್ತಮದಾಸರ ಬಂಗ್ಲೆಯಲ್ಲಿ ಉಳಿಯುತ್ತೇವೆ ಎಂದು ಬಾಪೂ ಹೇಳುತ್ತಿದ್ದರು. ಮುಂಬೈಗೆ ಬಂದ ನಂತರ, ದೊಡ್ಡಪ್ಪ ನಿಧನರಾದ್ದರಿಂದ ಅವರ ಸಂಬಂಧಿಕರನ್ನು ಸಂತೈಸುವುದಕ್ಕಾಗಿ ರಾಜಕೋಟ ಮತ್ತು ಪೋರಬಂದರಿಗೆ ಹೋಗುತ್ತಾರೆ.' ಎಂದ ಮಣಿಲಾಲ.

ಹರಿಲಾಲ ಇದಕ್ಕೂ ಮೊದಲು ಸೇಠ್ ನರೋತ್ತಮದಾಸರನ್ನು ಭೇಟಿಯಾಗಿರಲಿಲ್ಲ. ಆದರೆ ಅವರು ದೇಶದ ಓರ್ವ ಪ್ರತಿಷ್ಠಿತ ಮಿಲ್ ಮಾಲೀಕರಾಗಿದ್ದು, ಅವನು ಅವರ ಹೆಸರನ್ನು ಕೇಳಿದ್ದ. ರಾಜಕೋಟದಲ್ಲಿ ದೊಡ್ಡಪ್ಪ ನಿಧನರಾಗಿದ್ದರು; ಅವರ ಧಾರ್ಮಿಕ ವಿಧಿವಿಧಾನ ಇತ್ಯಾದಿಗಳಿಗೆ ಬಾಪೂ ರಾಜಕೋಟ ಮತ್ತು ಪೋರಬಂದರಿಗೆ ಹೋಗುವುದು ನಿಶ್ಚಿತವಾಗಿತ್ತು.

'ಮಣಿಲಾಲ,' ಹರಿಲಾಲ ವಿಶೇಷವಾಗಿ ಹೇಳಿದ, 'ಸೇಠ್ ನರೋತ್ತಮ ದಾಸರು ತುಂಬಾ ದೊಡ್ಡ ಮನುಷ್ಯರು. ಅವರ ಬಂಗ್ಲೆಯಲ್ಲಿ ಉಳಿಯಲು ಬಾ ಮತ್ತು ಬಾಪೂ ಅವರಿಗೆ ಯಾವುದೇ ತೊಂದರೆಯಾಗದು. ಆದರೆ ಒಂದು ವೇಳೆ ಬಾಪೂ ಅವರು ಸರಳ ಆಹಾರವನ್ನು ಸೇವಿಸುವ ವ್ರತವನ್ನು ಕೈಗೊಂಡಿದ್ದರೆ ಅಥವಾ ಅವರು ಆಹಾರ ಸೇವಿಸಲು ಬೇರೇನಾದರೂ ಪ್ರಯೋಗವನ್ನು ಮಾಡುತ್ತಿದ್ದರೆ, ಈ ವಿಷಯವನ್ನು ಮೊದಲೇ ಸೇಠ್ ನರೋತ್ತಮದಾಸರಿಗೆ ತಿಳಿಸುವುದು ಒಳ್ಳೆಯದು. ಇಲ್ಲದಿದ್ದಲ್ಲಿ ಅವರಿಗೆ ತೊಂದರೆಯಾಗುವುದು.'

'ಅಣ್ಣಾ, ನಿಮ್ಮ ಮಾತು ನಿಜ. ಆದರೆ ನಮಗೆ ಸೇಠ್ ನರೋತ್ತಮದಾಸರ ಪರಿಚಯವಿಲ್ಲ.'

'ಅದನ್ನು ನಾನು ನೋಡಿಕೊಳ್ಳುತ್ತೇನೆ' ಹರಿಲಾಲ ಆಶ್ವಾಸನೆ ಕೊಟ್ಟ.

ಬಾಪೂ ಅವರ ಹಡಗು ಮುಂಬೈಯ ರೇವುಪಟ್ಟಣದಲ್ಲಿ ಲಂಗರು ಹಾಕುವುದಕ್ಕೆ ಒಂದು ದಿನ ಮೊದಲೇ ಹರಿಲಾಲ ಮುಂಬೈಗೆ ಬಂದ. ಮುಂಬೈಯಲ್ಲಿ ರೇವಾಶಂಕರ್ ಅವರಿಗೆ ಹರಿಲಾಲನ ಪರಿಚಯ ಚೆನ್ನಾಗಿಯೇ ಇತ್ತು. ಅವರ ಮೂಲಕ ಅವನು ಸೇಠ್ ನರೋತ್ತಮದಾಸರನ್ನು ಸಂಪರ್ಕಿಸಿದ.

'ಹರಿಲಾಲ್,' ನರೋತ್ತಮದಾಸ್ ಸೇಠರು ಅವನನ್ನು ಸ್ವಾಗತಿಸಿದರು, 'ನೀವು ಹೀಗೆ ಭೇಟಿ ಮಾಡಲು ಬಂದಿದ್ದು ಒಳ್ಳೆಯದಾಯಿತು. ಬಾ ಮತ್ತು ಬಾಪೂ ಅವರು ಉಳಿದುಕೊಳ್ಳುವ ಬಗ್ಗೆ ನೀವೇನೂ ಚಿಂತಿಸಬೇಡಿ. ನೀವು ಹೇಳಿದಂತೆಯೇ ಅವರ ಊಟಕ್ಕೆ ವ್ಯವಸ್ಥೆಯಾಗುವುದು.'

'ನಿಮ್ಮ ಆತಿಥ್ಯದಲ್ಲಿ ಯಾವುದೇ ಕೊರತೆಯಾಗುವುದಿಲ್ಲ,' ಹರಿಲಾಲ ವಿವೇಕದಿಂದ ಹೇಳಿದ, 'ಇದೆಲ್ಲಾ ನಾನು ಯಾಕೆ ಹೇಳಿದನೆಂದರೆ, ನಿಮಗೆ ಅವರ ವ್ರತ ಮತ್ತು ಉಪವಾಸಗಳ ಬಗ್ಗೆ ಗೊತ್ತಿಲ್ಲ, ಬಾ ಮತ್ತು ಬಾಪೂ ಅವರು ಉಪವಾಸವನ್ನು ಕೈಗೊಂಡರೆ ನಿಮಗೆ ಸಂಕೋಚವಾಗಬಹುದು...'

'ಬಾ ಬಾಪೂ ಅವರ ಬಗ್ಗೆ ನಿಮಗಿರುವ ಕಾಳಜಿಯನ್ನು ನೋಡಿ ನನಗೆ ಸಂತೋಷವಾಯಿತು.' ನರೋತ್ತಮದಾಸರು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು, 'ನೀವು ಬಾಪೂ ಅವರ ಬಗ್ಗೆ ಸಿಟ್ಟು ಮಾಡಿಕೊಂಡು ದೇಶಕ್ಕೆ ಮರಳಿ ಬಂದಿದ್ದೀರ, ಬಾಪೂ ಅವರ ಬಗ್ಗೆ ನಿಮಗೆ ಸಿಟ್ಟಿದೆ ಎಂದು ಕೇಳಿದೆ...'

'ಸೇಠ್‌ಜಿ,' ಹರಿಲಾಲ ಸ್ವಲ್ಪ ಗಾಬರಿಗೊಂಡ; ಆದರೆ ತಕ್ಷಣ ಸುಧಾರಿಸಿಕೊಂಡು ಹೇಳಿದ, 'ತಂದೆ ಮಗನ ಮಧ್ಯೆ ಭೇದಭಾವನೆ ಸಹಜ. ಆದರೆ ಬಾಪೂ ಅವರಿಂದಾಗಿಯೇ ಇಂದು ನಾನಿದ್ದೇನೆ, ಈ ಸತ್ಯವನ್ನು ಮರೆಯುವಷ್ಟು ನಾನು ಕೃತಘ್ನನಲ್ಲ.'

'ಶಾಬಾಶ್ ಹರಿಲಾಲ್,' ನರೋತ್ತಮದಾಸರು ಹರಿಲಾಲನ ಹೆಗಲನ್ನು ತಟ್ಟಿದರು, 'ಬಾಪು ಅವರ ಮಗನಿಂದ ನಾನು ಇದೇ ಉತ್ತರದ ನಿರೀಕ್ಷೆಯಲ್ಲಿದ್ದೆ.'

ಮೊದಲ ಭೇಟಿಯಲ್ಲಿಯೇ ಸೇಠ್ ನರೋತ್ತಮದಾಸರ ಮನಸ್ಸಿನಲ್ಲಿ ಹರಿಲಾಲನ ಬಗ್ಗೆ ಸಾಕಷ್ಟು ಒಳ್ಳೆಯ ಅಭಿಪ್ರಾಯ ಮೂಡಿತು, ಹರಿಲಾಲನಿಗೂ ನರೋತ್ತಮದಾಸರ ಸಜ್ಜನತೆ ಮತ್ತು ಸ್ಪಷ್ಟತೆ ಇಷ್ಟವಾಯಿತು.

ಮುಂಬೈನ ರೇವುಪಟ್ಟಣದಲ್ಲಿ ಹಡಗು ಲಂಗರು ಹಾಕಿದಾಗ, ಬಾ ಮತ್ತು ಬಾಪೂ ಅವರು ಹಡಗಿನಿಂದ ಕೆಳಗಿಳಿದರು. ಅವರನ್ನು ಸತ್ಕರಿಸಲು ನಿಂತಿದ್ದ ಜನಸಮೂಹದಲ್ಲಿ ಎಲ್ಲರಿಗಿಂತ ಮುಂದೆ ಹರಿಲಾಲನಿದ್ದ. ಹಿಂದೂಸ್ತಾನದ ನೆಲದ ಮೇಲೆ ಕಾಲಿಡುತ್ತಲೇ ಹರಿಲಾಲ ಹೀಗೆ ತಮ್ಮನ್ನು ಭೇಟಿಯಾಗುತ್ತಾನೆ ಎಂಬ ವಿಷಯ ಬಾ ಮತ್ತು ಬಾಪೂ ಅವರಿಗೆ ಅನಿರೀಕ್ಷಿತವಾಗಿತ್ತು. ಹರಿಲಾಲನನ್ನು ನೋಡುತ್ತಲೇ ಬಾ ಅವರ ಕಣ್ಣುಗಳು ತುಂಬಿ ಬಂದವು, ಬಾಪೂ ಅವರು ಸಂತೋಷದಿಂದ ಗದ್ಗದಿತರಾದರು.

'ಹರಿ,' ಬಾಪೂ ಅವರು ಹರಿಲಾಲನ ತಲೆಯನ್ನು ನೇವರಿಸಿದರು, 'ನೀನು ಆರೋಗ್ಯವಾಗಿರುವುದನ್ನು ನೋಡಿ ನನ್ನೆಲ್ಲಾ ಚಿಂತೆಗಳು ಸಹ ದೂರವಾದವು. ಮನೆಯಲ್ಲಿ ಚಂಚಿ, ರಾಮಿ, ಕಾಂತಿ ಎಲ್ಲರೂ ಚೆನ್ನಾಗಿದ್ದಾರಲ್ಲ?'

ಹರಿಲಾಲ ಬಾಪೂ ಅವರ ಚರಣಗಳಿಗೆ ನಮಸ್ಕರಿಸಿದ. ಬಾಪೂ ಸೊರಗಿರುವುದನ್ನು ಹರಿಲಾಲ ಗಮನಿಸಿದ. ಅವರ ಗಲ್ಲಗಳ ಎಲುಬುಗಳು ಕಾಣ ಬರುತ್ತಿದ್ದವು. ಬಾ ಅವರು ಸಹ ತುಂಬಾ ಸೊರಗಿದ್ದರು.

'ಹರಿ, ಇನ್ನು ಕೆಲವು ದಿನಗಳು ನೀನು ನಮ್ಮೊಂದಿಗೇ ಇರು' ಎಂದರು ಬಾಪೂ.

'ಹೌದು ಹರಿ, ಎಷ್ಟೋ ವರ್ಷಗಳ ನಂತರ ಭೇಟಿಯಾಗಿದ್ದೀಯ. ಇನ್ನು ಎಲ್ಲಿಗೂ ಹೋಗಬೇಡ' ಬಾ ಅವರು ಬಿಕ್ಕಳಿಸಿದರು.

ಬಾಬಾಪೂ ಮತ್ತು ಹರಿಲಾಲನ ಈ ಮಿಲನವನ್ನು ನೋಡಿ ನರೋತ್ತಮ ಸೇಠರು ಮೊದಲ ಬಾರಿಗೆ ಹೇಳಿದರು, 'ಹರಿಲಾಲನಿಗೆ ಬಾ ಮತ್ತು ಬಾಪೂ ಅವರ ಬಗ್ಗೆ ಅದೆಷ್ಟು ಚಿಂತೆಯಿದೆ ಎಂಬುದು ಗೊತ್ತೆ? ನಿಮ್ಮ ಊಟವಸತಿಗೆ ವ್ಯವಸ್ಥೆಯನ್ನು ಮಾಡಲು ಇವರು ಅಹಮದಾಬಾದಿನಿಂದ ಬಂದು ನನ್ನನ್ನು ಭೇಟಿಯಾದರು...'

ಬಾಪೂ ಅವರಿಗೆ ಈ ಸುದ್ದಿ ಸಹ ಅನಿರೀಕ್ಷಿತವಾಗಿತ್ತು. ಸೇಠ್ ನರೋತ್ತಮದಾಸರ ಬಂಗ್ಲೆಯಲ್ಲಿ ಎರಡುಮೂರು ದಿನ ಇದ್ದ ನಂತರ ಬಾಪೂ ಅವರು ಹರಿಲಾಲನಿಗೆ ಹೇಳಿದರು.

'ನೋಡು ಹರಿ, ನೀನು ನಿನ್ನ ಸಹೋದರರಲ್ಲಿ ದೊಡ್ಡವನು. ನನಗೆ ನಿಮ್ಮೆಲ್ಲರ ಬಗ್ಗೆ ಒಂದೇ ತೆರನಾದ ಪ್ರೀತಿಯಿದೆ, ಆದರೆ ನೀನು ದೊಡ್ಡವನಾದ್ದರಿಂದ ನಿನ್ನನ್ನು ನನ್ನ ಸ್ನೇಹಿತನೆಂದು ತಿಳಿದಿದ್ದೇನೆ. ನಾಳೆ ನಾವು ರಾಜಕೋಟಕ್ಕೆ ಹೋಗೋಣ. ದೊಡ್ಡಪ್ಪ ನಿಧನರಾಗಿದ್ದಾರೆ, ಎಲ್ಲರನ್ನೂ ಭೇಟಿಯಾಗಿ ಸಾಂತ್ವನದ ಮಾತುಗಳನ್ನು ಹೇಳೋಣ.'

'ಆಗಲಿ ಬಾಪೂಜಿ,' ಹರಿಲಾಲ ಹೇಳಿದ, 'ಒಂದು ವೇಳೆ ರಾಜಕೋಟದಲ್ಲಿ ನನ್ನ ಅಗತ್ಯ ಇಲ್ಲದಿದ್ದರೆ, ನಾನು ಅಹಮದಾಬಾದಿನಲ್ಲಿಯೇ ಉಳಿಯಲೇ?'

'ಹರಿ, ನಿನ್ನ ಅಗತ್ಯವಿದೆ. ರಾಜಕೋಟಕ್ಕೆ ಹೋಗಲು ಎರಡು ಉದ್ದೇಶಗಳಿವೆ. ಅವರ ಸಂಬಂಧಿಕರಿಗೆ ಸಾಂತ್ವನದ ಮಾತುಗಳನ್ನು ಹೇಳುವುದು ಎಷ್ಟು ಅಗತ್ಯವೋ, ಅಷ್ಟೇ ಅಗತ್ಯದ ಇನ್ನೊಂದು ಕೆಲಸವೂ ಸಹ ಇದೆ. ಆ ಕೆಲಸಕ್ಕೆ ನನಗೆ ನಿನ್ನ ಅವಶ್ಯಕತೆಯಿದೆ.'

'ನನಗೆ ಅರ್ಥವಾಗಲಿಲ್ಲ ಬಾಪೂಜಿ.'

'ನಾನು ಆ ಬಗ್ಗೆ ಹೇಳುತ್ತೇನೆ.' ಬಾಪೂ ಅವರು ಶಾಂತರಾಗಿ ಹೇಳಿದರು, 'ಇದುವರೆಗೆ ನಾನು ವಿದೇಶದಲ್ಲಿದ್ದೆ. ದೊಡ್ಡಪ್ಪ ಮತ್ತು ಚಿಕ್ಕಪ್ಪ ಎಲ್ಲರೂ ಸೇರಿ ಇಲ್ಲಿಯ ಮನೆ–ಮಠದ ವ್ಯವಸ್ಥೆಯನ್ನು ನೋಡಿಕೊಂಡಿದ್ದಾರೆ. ಅವರೇ ನನ್ನನ್ನು ಓದಿಸಿದರು. ಆಫ್ರಿಕಾಕ್ಕೆ ಕಳುಹಿಸಿದರು. ನಿನ್ನ ಮದುವೆಯನ್ನು ಮಾಡಿದರು.

'ನೀನು ದೇಶಕ್ಕೆ ಮರಳಿ ಬಂದ ನಂತರ ನಿನಗೆ ಸಹಾಯವನ್ನು ಮಾಡಿದರು. ಈ ಉಪಕಾರವನ್ನು ಮರೆಯಲಾಗದು. ನಾನಂತೂ ಪರಿವಾರಕ್ಕೆ ಏನೂ ಮಾಡಲಿಲ್ಲ ಎಂಬುದು ನಿನಗೆ ಗೊತ್ತಿದೆ. ನನ್ನ ಜೀವನವೇ ಸಾರ್ವಜನಿಕರಿಗೆ ಮುಡಿಪಾಗಿದೆ. ಅದಕ್ಕೇ ಸಹೋದರರೊಂದಿಗೆ ಕೊಡು ಕೊಳ್ಳುವಿಕೆಯ ವ್ಯವಹಾರದಿಂದ ಮುಕ್ತನಾಗಲು ತೀರ್ಮಾನಿಸಿದ್ದೇನೆ.'

'ನೀವು ಸರಿಯಾಗಿ ಯೋಚಿಸಿಯೇ